# ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ಕೂಡ್ಲಿಗಿ.

# ಸಿ ಸಿ -235/2021

ದಿನಾಂಕಃ 07.10.2024 ರಂದು ಸಾಕ್ಷಿದಾರರಿಗೆ, ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

| | | |
|---|---|---|
| ಹೆಸರು | : | ಬಸವರಾಜ |
| ತಂದೆಯ ಹೆಸರು | : | ಅಜ್ಜನ ಗೌಡ |
| ವಯಸ್ಸು | : | 53 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ತೂಲ ಹಳ್ಳಿ |

## ಮುಖ್ಯ ವಿಚಾರಣೆ ವಿಶೇಷ ಸ.ಸ.ಅ ರವರಿಂದಃ

ನ್ಯಾಯಾಲಯದ ಮುಂದಿರುವ ಆರೋಪಿತರು ನನಗೆ ಗೊತ್ತು. ಚಾಸಾ- 1 ನನ್ನ ಹೆಂಡತಿ. ಚಾಸಾ- 5 ನನ್ನ ಮಗ. ಚಾಸಾ- 6 ನನ್ನ ಹಿರಿಯ ಮಗ. ಚಾಸಾ- 7 ನನ್ನ ಅಳಿಯ. ಚಾಸಾ- 8 ರಿಂದ 10 ನಮ್ಮ ಪಕ್ಕದ ಹೊಲದವರು. ಚಾಸಾ-11 ನನ್ನ ಅಣ್ಣನ ಮಗ. ದಿನಾಂಕ 18.06.2021 ಸರ್ವೆ ನಂ. 940 ಜಮೀನಿನಲ್ಲಿ ನಾವು ಮೆಕ್ಕೆ ಜೋಳ ಬೆಳೆಗೆ ಎಡೆಕುಂಟೆ ಹೊಡೆಯುತ್ತಿದ್ದೇವು. ಚಾಸಾ-1 ರವರು ಕಳೆ ಕೀಳುತ್ತಿದ್ದರು. ಅಷ್ಟೋತ್ತಿಗೆ ಆರೋಪಿತರೆಲ್ಲರೂ ಬಂದು ಟ್ರ್ಯಾಕ್ಟರ್ ನ್ನು ಹೊಡೆಯಲು ಅಲ್ಲಿಗೆ ಬಂದಿರುತ್ತಾರೆ. ಆರೋಪಿತರು ನಮಗೆ ಹೊಡೆದು ನಮ್ಮ ಹೆಣ್ಣು ಮಕ್ಕಳಿಗೂ ತಳ್ಳಾಡಿರುತ್ತಾರೆ. ಕಟ್ಟಿಗೆಯಿಂದ ನನ್ನ ಕಣ್ಣಿಗೆ ಹೊಡೆದಿರುತ್ತಾರೆ. ಆ ನಂತರ ಪೋನ್ ಮಾಡಿದಾಗ ನಮ್ಮ ಅಳಿಯ ಚಾಸಾ-7 ಅಲ್ಲಿಗೆ ಬಂದು ಗಲಾಟೆ ಬಿಡಿಸಿ ನಮ್ಮನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಚಾಸಾ- 5 ಮತ್ತು 6 ರವರಿಗೆ ಆರೋಪಿತರು ಹಲ್ಲೆ ಮಾಡಿರುತ್ತಾರೆ. ಸದರಿ ಜಮೀನಿನಲ್ಲಿ ನಾವು 40-50 ವರ್ಷಗಳಿಂದಲೂ ಸಾಗುವಳಿ ಮಾಡುತ್ತಿದ್ದೇವೆ. ಗಲಾಟೆಯನ್ನು ಚಾಸಾ- 7 ರಿಂದ 11 ರವರು ಬಿಡಿಸಿರುತ್ತಾರೆ. ನಾನು ಕೊಟ್ಟೂರು ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆಯನ್ನು ಪಡೆದುಕೊಂಡು ಹೆಚ್ಚಿನ ಚಿಕಿತ್ಸೆಯನ್ನು ಬಳ್ಳಾರಿಯ ಆಸ್ಪತ್ರೆಯಲ್ಲಿ ಪಡೆದುಕೊಂಡಿರುತ್ತೇನೆ. ಆರೋಪಿತರೆಲ್ಲರೂ ಸೇರಿಕೊಂಡು ನಮ್ಮ ಮಕ್ಕಳಿಗೂ ಹಲ್ಲೆ ಮಾಡಿರುತ್ತಾರೆ. ಆರೋಪಿತರು ಹಲ್ಲೆ ಮಾಡಿದ ಕಟ್ಟಿಯನ್ನು ನೋಡುತ್ತಿದ್ದು ಅದನ್ನು ಈಗಾಗಲೆ ಮುದ್ದೆ ಮಾಲು -1 ಎಂದು ಗುರುತಿಸಲಾಗಿದೆ. ಈ ಸಂಬಂಧವಾಗಿ ನಾನು ಪೊಲಿಸರಿಗೆ ಹೇಳಿಕೆಯನ್ನು ಕೊಟ್ಟಿರುತ್ತೇನೆ.

**ಪಾಟೀ ಸವಾಲು ಆರೋಪಿ ಪರ ವಕೀಲರಿಂದಃ**

ಸರ್ವೆ ನಂ. 940 ರಲ್ಲಿನ ಒಟ್ಟ ವಿಸ್ತಿರ್ಣ 3 ಎಕರೆ 69 ಸೆಂಟ್ಸ್ ಜಮೀನು ಆರೋಪಿ -1 ಮತ್ತು 2 ರವರ ತಾಯಿ ಪಾರ್ವತಮ್ಮ ತಂದೆ ದಿ.ರೇವಣಾಸಿದ್ಧಯ್ಯ ರವರ ಹೆಸರಿನಲ್ಲಿ ಖಾತೆ ಇದೆ ಎಂದರೆ ಸರಿ. ಸದರಿ ಆಸ್ತಿಗೆ ಸಂಬಂಧಿಸಿದಂತೆ ಆರೋಪಿತರು ನಮ್ಮ ವಿರುದ್ಧ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಓಎಸ್ ನಂ. 212/2022 ರಲ್ಲಿ ಶಾಶ್ವತ ನಿರ್ಭಂಧಕಾಜ್ಞೆ ಪರಿಹಾರವನ್ನು ಕೊರಿ ದಾವೆ ಸಲ್ಲಿಸಿದ್ದಾರೆ ಎಂದರೆ ಸರಿ. ಆ ದಾವೆಯಲ್ಲಿ ನಾವು ಪ್ರತಿವಾದಿಗಳಾಗಿದ್ದೇವೆ ಎಂದರೆ ಸರಿ. 5 ಮತ್ತು 7 ನೇ ಆರೋಪಿತರು ನಮ್ಮ ವಿರುದ್ಧ ಬೇರೊಂದು ಆಸ್ತಿಗೆ ಸಂಬಂಧಿಸಿದಂತೆ ಓಎಸ್ ನಂ.334/2021 ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. 6 ನೇ ಆರೋಪಿತರು ನಮ್ಮ ವಿರುದ್ಧ ಬೇರೊಂದು ಆಸ್ತಿಗೆ ಸಂಬಂಧಿಸಿದಂತೆ ಓಎಸ್ ನಂ.333/2021 ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ಸರ್ವೆ ನಂ. 940 ರಲ್ಲಿನ ಒಟ್ಟ ವಿಸ್ತಿರ್ಣ 3 ಎಕರೆ 69 ಸೆಂಟ್ಸ್ ಜಮೀನು ಮೂಲತಃ ಆರೋಪಿತರಿಗೆ ಪಿತ್ರಾರ್ಜಿತವಾಗಿ ಬಂದಂತಹ ಆಸ್ತಿ ಎಂದರೆ ಸರಿ. ಸದರಿ ಆಸ್ತಿಗಳನ್ನು ಅವರು ಆರೋಪಿತರು ಪಾಲು ವಿಭಾಗ ಮಾಡಿಕೊಂಡು ಅವರವರ ಹೆಸರಿಗೆ ಖಾತೆ ಮಾಡಿಸಿಕೊಂಡಿದ್ದಾರೆ ಎಂದರೆ ಸರಿ. ಸದರಿ ಸರ್ವೆ ನಂ. 940 ರಲ್ಲಿನ ಒಟ್ಟು ವಿಸ್ತಿರ್ಣ 3 ಎಕರೆ 69 ಸೆಂಟ್ಸ್ ಜಮೀನಿಗೆ ಸಂಬಂಧಿಸಿದಂತೆ ನಮ್ಮ ಬಳಿ ಯಾವುದೇ ದಾಖಲಿಗಳು ಇರುವುದಿಲ್ಲ. ಆರೋಪಿತರು ನಮಗೆ ಕಟ್ಟಿಗೆಯಿಂದ ಹಲ್ಲೆ ಮಾಡಿರುತ್ತಾರೆ ಎಂಬುವುದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಸದರಿ ಆಸ್ತಿಯೂ ನಮಗೆ ಸಂಬಂಧಪಟ್ಟ ಆಸ್ತಿ ಅಲ್ಲದೆ ಇದ್ದರೂ ಸಹ ಅಕ್ರಮ ಗುಂಪು ಕಟ್ಟಿಕೊಂಡು ಬಂದು ಅವರ ಮೇಲೆ ಹಲ್ಲೆ ಮಾಡಿದ್ದೇವೆ ಎಂದರೆ ಸರಿಯಲ್ಲ. ನಾವು ಆರೋಪಿತರ ಮೇಲೆ ಮಾರಣಾಂತಿಕಹಲ್ಲೆ ಮಾಡಿದ್ದರ ಕಾರಣಕ್ಕಾಗಿ ನಮ್ಮ ವಿರುದ್ದ ಸಿಸಿ ನಂ.193/2021 ನ್ನು ದಾಖಲಾಗಿದೆ ಎಂದರೆ ಸರಿ. ಆರೋಪಿತರು 1 ರಿಂದ 7 ರವರು ನಾನು ಬೆಳೆದಿದ್ದ ಮೆಕ್ಕೆ ಜೋಳದ ಬೆಳೆಯನ್ನು ಹಾನಿ ಮಾಡಿರುತ್ತಾರೆ ಎಂಬುವುದಾಗಿ ಹೇಳಿರವುದು ಸುಳ್ಳು ಎಂದರೆ ಸರಿಯಲ್ಲ . 1 ನೇ ಆರೋಪಿ ಕಟ್ಟಿಗೆಯಿಂದ ನನಗೆ ಹಲ್ಲೆ ಮಾಡಿರುತ್ತಾರೆ ಎಂದು ನಾನು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಕಟ್ಟಿಗೆ ಎಲ್ಲಾ ಕಡೆ ಸಿಗುತ್ತವೆ ಎಂದರೆ ಸರಿ. ನನ್ನ ಮುಖ್ಯವಿಚಾರಣೆಯಲ್ಲಿ ಹೇಳಲಾದ ಎಲ್ಲಾ ಅಂಶಗಳು ಸುಳ್ಳು ಎಂದರೆ ಸರಿಯಲ್ಲ. ಆರೋಪಿತರು ನಮ್ಮ ವಿರುದ್ಧ ಪ್ರಕರಣ ದಾಖಲಿಸಿದ ಕಾರಣ ನಾವು ಆರೋಪಿತರ ವಿರುದ್ದ

ಸುಳ್ಳು ಪ್ರಕರಣವನ್ನು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ನಾನು ಹೇಳುವ ರೀತಿಯಲ್ಲಿ ಆರೋಪಿತರು ಯಾವುದೇ ತಪ್ಪು ಮಾಡಿಲ್ಲ ಎಂದರೆ ಸರಿಯಲ್ಲ. ಆದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

**ಓ,ಹೇ,ಕೇ,ಸರಿ ಇದೆ,**

**ಹಿ.ಸಿ.ಜೆ ಮತ್ತು ಜೆ.ಎಂ.ಎಫ್.ಸಿ**
**ಕೂಡ್ಲಿಗಿ.**